# ರೇಷ್ಮೆಕೃಷಿ ತ್ಯಾಜ್ಯಗಳ ಮೌಲ್ಯವರ್ಧನೆ ಮತ್ತು ಬಳಕೆ

ಡಾ. ಶಶಿಧರ್ ಕೆ.ಆರ್. ಮತ್ತು ಕೆ. ತುಳಸಿರಾಮ್
ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ, ಟಮಕ, ಕೋಲಾರ-563102





ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಸ್ವಸಹಾಯ ಸಂಘ ಮತ್ತು ಸ್ತ್ರೀ ಸಂಘದ ಮಹಿಳೆಯರಿಗೆ "ರೇಷ್ಮೆಕೃಷಿ ತ್ಯಾಜ್ಯಗಳ ಮೌಲ್ಯವರ್ಧನೆ ಮತ್ತು ಬಳಕೆ" ಎಂಬ 2 ದಿನಗಳ ವೃತ್ತಿಪರ ತರಬೇತಿ ಕಾರ್ಯಕ್ರಮವನ್ನು ದಿನಾಂಕ 20.08.2015 ಮತ್ತು 21.08.2015 ರಂದು ತೋಟಗಾರಿಕಾ ಮಹಾವಿದ್ಯಾಲಯದ ವಿಚಾರ ಸಂಕೀರಣ ಕೊಠಡಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ ಕೋಲಾರದ ಡೀನ್‌ರಾದ ಡಾ. ವಿ. ನಾಚೆಗೌಡ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್, ಕೋಲಾರ ತಾಲ್ಲೂಕಿನ ರೇಷ್ಮೆ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಎಲ್. ಕೃಷ್ಣಪ್ಪ, ನಿವೃತ್ತ ಪ್ರಾಧ್ಯಾಪಕರಾದ ಡಾ. ಶಿವಾನಂದಮ್ ಮತ್ತು ಚಿಂತಾಮಣಿ ರೇಷ್ಮೆಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಎಂ. ವಿಜಯೇಂದ್ರ ಮತ್ತು ಸಹಾಯಕ ಪ್ರಾಧ್ಯಾಪಕರಾದ ಚಂದ್ರಶೇಖರ್ ಕಳ್ಳಿಮನಿ ರವರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕಾ ಮಹಾವಿದ್ಯಾಲಯದ ಡೀನ್‌ರಾದ ಡಾ. ವಿ. ನಾಚೆಗೌಡರವರು ಮಾತನಾಡಿ ರೇಷ್ಮೆ ಉದ್ಯಮವು ಕರ್ನಾಟಕ ರಾಜ್ಯದ ಮುಖ್ಯ ವಾಣಿಜ್ಯ ಬೆಳೆಯಾಗಿದ್ದು, ಗ್ರಾಮೀಣ ಭಾಗದ ಜನರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸಬಲ್ಲ ಹಾಗೂ ಅಧಿಕ ಲಾಭದಾಯಕ ಕೃಷಿಯಾಗಿದೆ. ರೇಷ್ಮೆ ಕೃಷಿಯ ವಿವಿಧ ಹಂತಗಳಾದ ಹಿಪ್ಪುನೇರಳೆ ಬೇಸಾಯ, ರೇಷ್ಮೆ ಹುಳು ಸಾಕಾಣಿಕೆ, ನೂಲು ಬಿಚ್ಚಾಣಿಕೆ ಮತ್ತು ಗೂಡಿನ ನಂತರದ ಇತರೆ ಸಂಸ್ಕರಣಾ ಚಟುವಟಿಕೆಗಳು ಪ್ರತಿಯೊಂದು ಹಂತ ದಲ್ಲಿಯೂ ಹೆಚ್ಚಿನ ಉದ್ಯೋಗಾವಕಾಶ ಮತ್ತು ಲಾಭವನ್ನು ಒದಗಿಸುತ್ತದೆ. ರೇಷ್ಮೆ ಬಿಚ್ಚಾಣಿಕೆಗೆ ಸೂಕ್ತವಲ್ಲದ ಗೂಡಿನಿಂದ ರೇಷ್ಮೆ ಹಾರ ಮತ್ತು ಅಲಂಕಾರಿಕಾ ಹೂಕುಂಡದಂತಹ ಕರಕುಶಲ ವಸ್ತುಗಳನ್ನು ತಯಾರಿಸುವುದರಿಂದ ಮಹಿಳೆಯರ ಆರ್ಥಿಕತೆ ಅಭಿವೃದ್ಧಿಗೊಳಿಸಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಬಿ.ಎಲ್. ಕೃಷ್ಣಪ್ಪ, ರೇಷ್ಮೆ ಸಹಾಯಕ ನಿರ್ದೇಶಕರು, ಕೋಲಾರರವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ರೇಷ್ಮೆ ಧಾರಣೆಯಲ್ಲಿ ಸಾಕಷ್ಟು ಕುಸಿತ ಕಂಡುಬರುತ್ತಿದೆ. ರೈತರು ಸಂಘಟಿತ ರಾಗಬೇಕು. ಪ್ರತಿಯೊಂದು ಬೆಳೆಗೂ ಒಂದೊಂದು ಫೆಡರೇಷನ್ (ಸಂಘ) ಮಾಡಿಕೊಳ್ಳಬೇಕು. ಆಗ ಮಾತ್ರ ಸಮಸ್ಯೆಗಳ ಚರ್ಚೆಗೆ ಸುಲಭವಾಗುತ್ತದೆ. ರೇಷ್ಮೆಯಲ್ಲಿ ಶೇ. 60ರಷ್ಟು ಗೂಡುಗಳು ಮಾತ್ರ ಗುಣಮಟ್ಟ ಹೊಂದಿದ್ದು ಶೇ. 40 ರಷ್ಟು ಗೂಡುಗಳು ಕಳಪೆ ಗುಣಮಟ್ಟದಿಂದ ಕೂಡಿರುವುದರಿಂದ ನೂಲು ಬಿಚ್ಚಾಣಿಕೆಗೆ ಸೂಕ್ತವಲ್ಲ. ಆದ್ದರಿಂದ ರೈತರು ಗುಣಮಟ್ಟ ಆಧಾರಿತ ದ್ವಿತಳಿ ರೇಷ್ಮೆ ಗೂಡುಗಳನ್ನು ಬೆಳೆಯಬೇಕು ಎಂದು ತಿಳಿಸಿದರು. ಈ ಹಿಂದೆ ರೇಷ್ಮೆ ಇಲಾಖೆಯಲ್ಲಿ ಕರಕುಶಲ ವಸ್ತುಗಳ ತಯಾರಿಕೆಗೆ ಬಳಸುವ ಚಿಟ್ಟೆ ಕೊರೆದ ಗೂಡಿಗೆ ಶೇ. 50ರಷ್ಟು ಸಹಾಯಧನ ನೀಡುತ್ತಿದ್ದರು. 2015-16ನೇ ಸಾಲಿನಲ್ಲಿ ಕರಕುಶಲ ವಸ್ತುಗಳ ತಯಾರಿಕೆಗೆ ಖರೀದಿಸುವ ಚಿಟ್ಟೆ ಕೊರೆದ ಗೂಡಿಗೆ ಶೇ90ರಷ್ಟು ಸಹಾಯಧನ ನಿಗಧಿಪಡಿಸಲಾಗಿದೆ.



ಕೋಲಾರ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್, ಮಾತನಾಡಿ ತೆಂಗಿನ ಮರದ ಪ್ರತಿಯೊಂದು ಭಾಗವನ್ನು ಉಪಯೋಗಿಸುವ ರೀತಿ ಹಿಪ್ಪುನೇರಳೆ ಮತ್ತು ಹುಳುಸಾಕಾಣಿಕೆಯಲ್ಲಿ ಲಭ್ಯವಾಗುವ ಎಲ್ಲ ಸಹ ಉತ್ಪನ್ನಗಳನ್ನು

ಉಪಯೋಗ ಮಾಡಿಕೊಳ್ಳಬಹುದು. ನಗರ ಮತ್ತು ಹಳ್ಳಿಗಳಲ್ಲಿ ಅಲಂಕಾರಿಕ ವಸ್ತುಗಳಿಗೆ ಜನ ಹೆಚ್ಚಿನ ಗಮನ ಮತ್ತು ದುಡ್ಡನ್ನು ವ್ಯಯಿಸುತ್ತಿದ್ದಾರೆ. ಈ ಎರಡು ದಿನಗಳ ತರಬೇತಿಯಿಂದ ತಾವೆಲ್ಲರೂ ಕರಕುಶಲ ವಸ್ತುಗಳನ್ನು ಸಿದ್ಧಪಡಿಸುವ ಬಗ್ಗೆ ತಿಳಿದು ಕೊಳ್ಳಬೇಕೆಂದು ಹೇಳಿದರು.





ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದಂತಹ ಚಿಂತಾಮಣಿ ರೇಷ್ಮೆ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಎಂ. ವಿಜಯೇಂದ್ರ ರವರು ಮಾತನಾಡಿ, ಚೀನಾ ದೇಶದಲ್ಲಿ ರೇಷ್ಮೆ ಕೃಷಿಯು ಹೆಚ್ಚು ಲಾಭದಾಯಕವಾಗಿದ್ದು ರೇಷ್ಮೆ ಗೂಡಿನ ಉತ್ಪಾದನೆಯ ಜೊತೆಗೆ 5ನೇ ಹಂತದಲ್ಲಿರುವ ರೇಷ್ಮೆ ಹುಳುಗಳಲ್ಲಿರುವ ಗ್ರಂಥಿಯನ್ನು ಸೌಂದರ್ಯವರ್ಧಕಗಳ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. ಅರ್ಧ ಮಾಗಿದ ಹಿಪ್ಪುನೇರಳೆ ಹಣ್ಣುಗಳಲ್ಲಿ "ಸಿ" ಜೀವಸತ್ವ ಹೆಚ್ಚಾಗಿರುವುದರಿಂದ ಅವುಗಳನ್ನು ಉಪ್ಪಿನಕಾಯಿ ತಯಾರಿಕೆಯಲ್ಲಿ ಬಳಸಬಹುದು. ಹಣ್ಣುಗಳನ್ನು ತುಂಬಾ ಬೆಲೆಬಾಳುವ ವೈನ್ ತಯಾರಿಸಲು ಬಳಸಲಾಗುತ್ತಿದೆ. ಹಿಪ್ಪುನೇರಳೆ ಕಾಂಡಗಳನ್ನು ವಿವಿಧ ಕ್ರೀಡೆಗಳಲ್ಲಿ ಉಪಯೋಗಿಸಲಾಗುತ್ತಿದೆ. ಉದಾ. ಕ್ರಿಕೆಟ್ ಬ್ಯಾಟ್, ಟೆನ್ನಿಸ್ ರಾಕೆಟ್ ಮತ್ತು ಹಾಕಿ ಸ್ಟಿಕ್‌ಗಳನ್ನು ತಯಾರಿಸಲು ಹಗುರ ಮತ್ತು ಗಟ್ಟಿಯಾಗಿರುವ ಹಿಪ್ಪುನೇರಳೆ ಮರವನ್ನು ಬಳಸಲಾಗುತ್ತಿದೆ. ಪ್ರಾಯೋಗಿಕವಾಗಿ ರೇಷ್ಮೆ ಕರಕುಶಲ ವಸ್ತುಗಳನ್ನು ತಯಾರಿಸುವ ಬಗ್ಗೆ ತರಬೇತಿ ನೀಡುತ್ತ ಕರಕುಶಲ ವಸ್ತುಗಳನ್ನು ತಯಾರಿಸಲು ತಾಳ್ಮೆ, ಸಂಯಮ ಮತ್ತು ಅತೀ ಮುಖ್ಯವಾಗಿ ಕ್ರಿಯಾಶೀಲತೆ ಬೇಕು. ಒಂದೇ ರೀತಿಯ ವಸ್ತುಗಳನ್ನು ತಯಾರಿಸಿದರೆ ಮಾರಾಟಕ್ಕೆ ಕಷ್ಟವಾಗುತ್ತದೆ. ಮದುವೆ ಸಮಾರಂಭಗಳಿಂದ ಹಿಡಿದು ದಿನನಿತ್ಯದ ಗೃಹ ಅಲಂಕಾರಕ್ಕೆ ಬಳಸಲಾಗುತ್ತಿದೆ. ಈ ಉದ್ಯಮವು ತೋಟಗಾರಿಕೆಯ ಪುಷ್ಪ ಅಲಂಕಾರಕ್ಕೆ ಪೈಪೋಟಿಯಾಗಿ ನಿಲ್ಲುತ್ತಿದೆ. ಸಾಕಷ್ಟು ಒಳಾಂಗಣ ಶಿಲ್ಪಿಗಳು ಈ ಕರಕುಶಲ ವಸ್ತುಗಳನ್ನು ಒಳಾಂಗಣ ಅಲಂಕಾರಕ್ಕೆ ಬಳಸಲು ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆಂದು ತಿಳಿಸಿದರು. ಪ್ರಾಯೋಗಿಕವಾಗಿ ವಿವಿಧ ರೀತಿಯ ಹೂಗಳನ್ನು, ಹಾರಗಳನ್ನು, ಹೂಕುಂಡಗಳನ್ನು, ಪುಷ್ಪಗುಚ್ಛಗಳನ್ನು, ಗೋಡೆಗೆ ಹಾಕುವ ಅಲಂಕಾರಿಕ ಚೌಕಟ್ಟುಗಳನ್ನು ಹಾಜರಿದ್ದ ಸ್ವಸಹಾಯ ಸಂಘದ ಮಹಿಳೆಯರ ಮುಖಾಂತರ ಮಾಡಿಸಿದರು.

ತರಬೇತಿಯ ಎರಡನೇ ದಿನದಂದು ಶ್ರೀ ಚಂದ್ರಶೇಖರ್ ಎಸ್. ಕಳ್ಳಿಮನಿ, ಸಹಾಯಕ ಪ್ರಾಧ್ಯಾಪಕರು (ಸಹ ಉತ್ಪನ್ನಗಳ ಬಳಕೆ), ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿರವರು ಹಿಪ್ಪುನೇರಳೆ ಸೊಪ್ಪಿನ ಔಷಧಿಯ ಗುಣಧರ್ಮಗಳು, ಹಿಪ್ಪುನೇರಳೆ ಹಣ್ಣಿನ ಪದಾರ್ಥಗಳು, ರೇಷ್ಮೆ ಹುಳುವಿನ ಹಿಕ್ಕೆಯಿಂದ ಜೈವಿಕ ಅನಿಲ ಉತ್ಪಾದನೆ, ರೇಷ್ಮೆಕೃಷಿ ತ್ಯಾಜ್ಯಗಳಿಂದ ಎರೆಹುಳು ಗೊಬ್ಬರ ತಯಾರಿಕೆ ಬಗ್ಗೆ ವಿವರಿಸಿ, ನಂತರ ಹಿಪ್ಪುನೇರಳೆ ಎಲೆಯಿಂದ ಚಹಾ ತಯಾರಿಕೆ, ಕರ್ರಿ, ಪರಾಠ, ಪಕೋಡ ಇತ್ಯಾದಿ ತಿನಿಸುಗಳ ತಯಾರಿಕೆಯನ್ನು ಪ್ರಾಯೋಗಿಕವಾಗಿ ಸ್ವಸಹಾಯ ಸಂಘದ ಮಹಿಳೆಯರಿಗೆ ತಿಳಿಸಿಕೊಟ್ಟರು.




ಈ 2 ದಿನಗಳ ವೃತ್ತಿಪರ ತರಬೇತಿ ಕಾರ್ಯಕ್ರಮವನ್ನು ಕೋಲಾರ ಕೃಷಿ ವಿಜ್ಞಾನ ಕೇಂದ್ರದ ರೇಷ್ಮೆ ಕೃಷಿ ವಿಭಾಗದ ವಿಜ್ಞಾನಿಯಾದ ಡಾ. ಶಶಿಧರ್, ಕೆ.ಆರ್. ರವರು ಕ್ರಮಬದ್ಧವಾಗಿ ಸಂಯೋಜಿಸಿದರು. ಸದರಿ ಕಾರ್ಯಕ್ರಮದಲ್ಲಿ ಡಾ. ಸಂತೋಷ್ ಹೆಚ್.ಎಂ. ಕೌಶಲ್ಯ ತರಬೇತಿ ಸಹಾಯಕಿ ಕುಮಾರಿ ರಾಜೇಶ್ವರಿರವರು ತರಬೇತಿಯಲ್ಲಿ ಭಾಗವಹಿಸಿ ಪ್ರಾಯೋಗಿಕವಾಗಿ ಹಲವು ಕೌಶಲ್ಯತೆಗಳ ಬಗ್ಗೆ ತೋರಿಸಿಕೊಟ್ಟರು. ಕೋಲಾರ ತಾಲ್ಲೂಕಿನ 30 ಸ್ವಸಹಾಯ ಸಂಘ ಮತ್ತು ಸ್ತ್ರೀಶಕ್ತಿ ಸಂಘದ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.